


ಹಾಸ್ಯದ ಹೊಳೆಗೆ ಹೊಸ ನೀರು 'ಕಾಮಿಕ್‌ಸ್ತಾನ್'

'ಮರಳು ರಾಶಿಯಂತೆ ಬೆಟ್ಟತಪ್ಪ ಪುರವಾರಂ' ಹೀಗೊಂದು ಸಾಲು ಹಳಗನ್ನಡದ ಸೌಂದರ್ಯವರ್ಣನೆಯಲ್ಲಿ ಬಂದೊಡನೆ ಹೈಸ್ಕೂಲಿನ ಕನ್ನಡ ಮೇಡಂ, 'ಆಲ್‌ರೈಟ್... ಮುಂದಕ್ಕೆ ಹೋಗೋಣ' ಎನ್ನುವಂತೆ ಅರ್ಥಮಾಡಿಸುವ ಗೊಡವೆಗೆ ಬೆನ್ನುಮಾಡಿಬಿಟ್ಟಿದ್ದರು. ಜೀವಶಾಸ್ತ್ರದ ಪಾಠ ಹೇಳುವ ಇನ್ನೊಬ್ಬ ಮೇಡಂ ಚಿತ್ರ ಬಿಡಿಸುವುದರಲ್ಲಿ ನಿಸ್ಸೀಮರಾಗಿದ್ದವರು. ಜನನಾಂಗಗಳ ಕುರಿತು ಬಿಡಿಸಿ ಹೇಳಬೇಕಾದ ಪಾಠ ಬಂದಾಗ ಅವರು ಬೋರ್ಡಿನ ಕಡೆಗೆ ಮಾಡಿದ ಮುಖವನ್ನು ಪೀರಿಯೆಡ್ ಮುಗಿದ ಮೇಲೆಯೇ ವಿದ್ಯಾರ್ಥಿಗಳತ್ತ ತಿರುಗಿಸಿದ್ದು. ಅವರು ಬಿಡಿಸಿದ ಚಿತ್ರಗಳೇನೋ ಚೆನ್ನಾಗಿದ್ದವು. ಆದರೆ, ಪಠ್ಯವಿಷಯವನ್ನು ಅರ್ಥ ಮಾಡಿಕೊಳ್ಳಲು ತಲೆ ಕೆರೆದುಕೊಳ್ಳಬೇಕಾಯಿತು.

ಹೀಗೆ ಆದಾಗಲೆಲ್ಲ ಗೆಳೆಯರ ಅಥವಾ ಗೆಳತಿಯರ ಬಳಗ ಚುರುಕಾಗುತ್ತದೆ. ಮೇಡಂಗಳೋ ಮೇಷ್ಟರುಗಳೋ ಹೇಳದೇ ತಲೆಯಲ್ಲಿ ಇಳಿಸಿದ ಕುತೂಹಲದ ಹುಳು ಕೊರೆಯುವ ಪರಿ ಇದು. 'ಪುರವಾರಂ' ಎಂದರೆ ನಿತಂಬಗಳು ಎಂದು ಕನ್ನಡ ನಿಘಂಟು ಕಣ್ಣುಮಿಟುಕಿಸಿದರೆ, ಜನನಾಂಗಗಳ ವಿವರಗಳ ಅರ್ಥಾನುಸಂಧಾನ ನಡೆಸುವ ಪಡ್ಡೆಗಳ ತುಟಿ ಮೇಲೊಂದು ತುಂಟ ಕಿರುನಗೆ ಮೂಡಿರುವುದನ್ನು ನೀವು–ನಾವು ನೋಡಿರಲಿಕ್ಕೂ ಸಾಕು.

ಮೊನ್ನೆ ಯೂಟ್ಯೂಬ್‌ನಲ್ಲಿ ಹೀಗೇ ಒಂದು ಸ್ಟ್ಯಾಂಡ್‌ಅಪ್ ಕಾಮಿಡಿಯ ವಿಡಿಯೊ ನೋಡುವಾಗ ಶಾಲಾ–ಕಾಲೇಜು ದಿನಗಳ ಈ ನಾಸ್ಟಾಲ್ಜಿಯಾ ಕಣ್ಮುಂದೆ ಬಂದದ್ದು. ''ದಿಲ್ ಸೆ ಪಿಕ್ಚರ್‌ನೊಳಗ ಶಾರುಖ್ ಖಾನ್‌ನ ಪ್ರೀತಿ ಜಿಂಟಾ ಕೇಳ್ತಾಳೆ – ಆರ್ ಯೂ ಎ ವರ್ಜಿನ್? ನಾನು ಪ್ರೊಫೆಷನ್ ಇರಬೇಕು ಅಂತ ಆಗ ಅಂದ್ಕೊಂಡೆ ಈ ವರ್ಡ್ ತಲೆಯೊಳಗ ರಿಜಿಸ್ಟರ್ ಆತು. ನಮ್ ಅವ್ವಾ ಹತ್ರ ಹೋಗಿ ವರ್ಜಿನ್ ಅಂದರೇನು ಅಂತ ಕೇಳ್ದೆ. ಅದಕ್ಕೆ ಅವಳು – 'ಎನಿಥಿಂಗ್ ಅನ್‌ಟಚ್ಡ್ ಈಸ್ ವರ್ಜಿನ್' ಎಂದಳು. ಈಗ ವರ್ಡ್ ಗೊತ್ತಿತ್ತು. ಅರ್ಥ ಗುರ್ತಿತ್ತು. ಯಾವಾಗಾರೂ ಯೂಸ್ ಮಾಡೋಣಂತ ಆಮೇಲೆ ಒಂದ್ ದಿವ್ಸ ನಾವ್ ಮಠಕ್ಕೆ ಹೋದಿವಿ. ರಾಯರ ಆರಾಧನೆ ಇತ್ತು. ಎಲಿ ಹಾಕಿದ್ರ ಕೂತಿದ್ವ್ಯಾ ನಾನು ನಮ್ಮಮ್ಮ, ಅಪ್ಪ, ಮೌಶಿ, ಕಾಕಾ ಎಲ್ಲ ಕೂತಿದ್ರು. ಬಡಿಸಿದ್ರು. ಆವಾಗ ನಾ ಅಂದೆ... 'ಅಮ್ಮ ಈ ಪಲ್ಯ ನೀ ತಗೊ, ವರ್ಜಿನ್ ಅದೆ'. ಪಿನ್‌ಡ್ರಾಪ್ ಸೈಲೆನ್ಸ್. ಎಲ್ಲರೂ ನನ್ ಕಡೆ ನೋಡ್ಲಿಕ್ಕೆ ಹತ್ತಾರೆ... ಆ ಸೈಲೆನ್ಸ್ ಬ್ರೇಕ್ ಮಾಡಕ್ಕೆ ಯಾರೋ ಒಬ್ಬ ಪುಣ್ಯಾತ್ಮ ಒದರಿದ್ರು... 'ಶ್ರೀಮದ್ ರಮಾ ರಮಣ ಗೋವಿಂದಾ... ಗೋವಿಂದ'. ಅವತ್ತ್ ನಮ್ ಮನಯಾಗ ಗೊತ್ತಾತು ಎಲ್ಲರಿಗೂ ನಾ ದೊಡ್ಡ ಆಕಿ ಆಗಿದೀನಿ ಅಂತ'' –ಸೋನು ವೇಣುಗೋಪಾಲ್ ಕನ್ನಡದಲ್ಲಿ ಸ್ಟ್ಯಾಂಡ್‌ಅಪ್ ಕಾಮಿಡಿಯಲ್ಲಿ ಮಾಡಿರುವ ಈ ಜೋಕಿಗೆ ಚಪ್ಪಾಳೆ ಸದ್ದು ಜೋರಾಗೇ ಕೇಳಿತು.

'ಕಾಮಿಕ್‌ಸ್ತಾನ್' ಎಂಬ ಹಿಂದಿಯ ಹಾಸ್ಯವಲ್ಲರಿ ಸ್ಪರ್ಧೆಯಲ್ಲಿ ಸ್ಟ್ಯಾಂಡ್‌ಅಪ್ ಕಾಮಿಡಿಯನ್ ಆಗಿ ಸದ್ದು ಮಾಡಿದ ಐಶ್ವರ್ಯಾ ಮೋಹನ್‌ರಾಜ್ ಎಂಬ ಹೆಣ್ಣುಮಗಳು ತನ್ನ ಹದಿಮೂರನೇ ವಯಸ್ಸಿನಲ್ಲಿ ಮೊದಲ ಪ್ರೇಮ ಪಲ್ಲವಿಸಿದ ಗಳಿಗೆಯನ್ನು ನೆನೆಯುವಾಗ, 'ಜನನಾಂಗ ನಿರಂತರವಾಗಿ ಸ್ರವಿಸುವಂತೆ ಮಾಡಿಕೊಳ್ಳುತ್ತಿದ್ದ ದಿನಗಳವು' ಎಂದು ನಿರ್ಭಿಡೆಯಿಂದ ಹೇಳಿದ್ದು ಅಚ್ಚೊತ್ತಿತು. ಅವರು ಹಾಸ್ಯವಲ್ಲರಿ ಹರಿಸುವಾಗ